ಅವರಿಗೊಂದು ಲೆಟರ್ ಬರೆದಿಟ್ಟು ನಿಮ್ಮಲ್ಲಿಗೆ ಬಂದುಬಿಡ್ತೇನೆ ಸಂತೋಷ. ನಂತರ ಡೈವೋರ್ಸ್ ಪಡೆದು ಮದುವೆಯಾಗುವಾ' ಎನ್ನುತ್ತ ಅವನ ಕೈಯನ್ನು ತನ್ನ ಕಣ್ಣಿಗೊತ್ತಿಕೊಂಡು ಎದ್ದುನಿಂತಳು.

ರಾತ್ರಿಯೆಲ್ಲ ಅವಳ ಹೃದಯದಲ್ಲಿ ಭಾವನೆಗಳ, ಅನಿಸಿಕೆಗಳ ಹರಿದಾಟ, ತಾನು ತಾಯಿಯಾಗುವ ಸಾಧ್ಯತೆಯ ಕಲ್ಪನೆಯಿಂದಲೇ ಅವಳಿಗೆ ಬಡಿದುಕೊಳ್ಳುತ್ತಿತ್ತು.

ತಾನು ಸಂತೋಷನ ಹತ್ತಿರ ಹೋಗುತ್ತಿರುವುದಾಗಿಯೂ ತನಗೆ ಡೈವೋರ್ಸ್ ಬೇಕೆಂದೂ ತಾವಿಬ್ಬರೂ ಮದುವೆಯಾಗಿ ತಾನು ತಾಯಿಯಾಗುವೆನೆಂದೂ ಕಾರ್ತಿಕನಿಗೆ ಪತ್ರ ಬರೆದು ಕವರ್‌ನಲ್ಲಿ ಹಾಕದೆ ಹಾಗೆಯೇ ಮಡಿಸಿ ಅವನು ಬಂದ ತಕ್ಷಣ ಕಣ್ಣಿಗೆ ಬೀಳುವಂತೆ ಟೇಬಲ್ ಮೇಲಿಟ್ಟು ಪೇಪರ್‌ವೈಟ್ ಇಟ್ಟಳು. ತೃಪ್ತಿಯ ಉಸಿರೆಳೆದು ಕಣ್ಣುರೆಪ್ಪೆ ಕೂಡಿಸಿದಾಗ ಸುಂದರ ಕನಸುಗಳ ರಾಶಿಗಳೇ ಅವಳ ಮುಂದೆ ಮೆರವಣಿಗೆ ಹೊರಟವು. ಅನಿಸಿಕೆಗಳು ಅಲಂಕರಿಸಿಕೊಂಡು ಸುಳಿದಾಡಿದವು. ಹಂಬಲಕ್ಕೆ ನಾಲಿಗೆ ಜಿಗಿದು ಮಾತಾಡಿತು. ಭಾವನೆಗಳು ಪ್ರತಿಧ್ವನಿ ಕೇಳಿ ನಸುನಕ್ಕವು.

ಬೆಳಿಗ್ಗೆ ಎದ್ದಾಗ ಅವಳು ಉಲ್ಲಾಸದಲ್ಲಿದ್ದಳು. ಮುಖ ತೊಳೆದುಕೊಂಡು ಟೀ ಮಾಡಿ ಕುಡಿದಳು. ಸ್ನಾನ ಮಾಡುವಾಗ ಎಂದಿಗಿಂತ ಖುಷಿಯೆನಿಸಿತು. ಅಡಿಗೆ ಮಾಡುವ ಯೋಚನೆಯೇ ಬರಲಿಲ್ಲ. ಕಾರ್ತಿಕನು ಕೊಟ್ಟ ವಸ್ತ್ರ ಒಡವೆಗಳನ್ನೆಲ್ಲ ಬೀರುವಿನಲ್ಲಿ ಇಟ್ಟು ಬೀಗಹಾಕಿದಳು. ಹಾಗೇ ಅಂಗಳಕ್ಕೆ ಬಂದಳು. ಕೊನೆಯ ಸಲ ಗಿಡಗಳಿಗೆ ನೀರೆರೆಯುವ ಬಯಕೆಯಾಯಿತು. ಬಕೆಟ್‌ನಲ್ಲಿ ನೀರು ತುಂಬಿ ಬೊಡ್ಡೆಗಳಿಗೆ ಎರೆಯುತ್ತ ನಡೆದಳು. ಆ ಪುಟ್ಟ ಮರ, ಹೂ, ಹಣ್ಣು ಬಿಡದ ಆದರೆ ನಿಬಿಡವಾದ ಎಲೆಗಳಿಂದ ಕೂಡಿ ದಟ್ಟ ಹಸುರಿನ ಮಂಟಪದಂತೆ ನಿಂತ ನಿರ್ವೀಯ ಮರ. ಹೂಂ, ಹೋಗುವಾಗ ಇದನ್ನು ಕತ್ತರಿಸಿಹಾಕಬೇಕು. ಅಪ್ರಯೋಜಕ ಎಂದುಕೊಂಡು ಒಳಬಂದಳು.

ಯಾವುದೋ ಹಾಡನ್ನು ಗುನುಗುನಿಸುತ್ತ ಅಲಂಕರಿಸಿಕೊಂಡಳು. ಚಪ್ಪಲಿ ಮೆಟ್ಟಿ ಆ ಮರ ಕತ್ತರಿಸಲು ಕತ್ತಿಯನ್ನು ಹಿಡಿದು ಬಂದು ಬಾಗಿಲು ತೆಗೆದರೆ ದಿಗ್ಭ್ರಮೆಗೊಂಡು ನಿಂತುಬಿಟ್ಟಳು! ಹೃದಯವೇ ಬಾಯಿಗೆ ಬಂದಂತಾಯ್ತು. ಅರೆ ತೆರೆದ ತುಟಿಗಳು, ಬೆದರಿದ ಕಣ್ಣು, ಹೊಡೆದುಕೊಳ್ಳುವ ಎದೆ.

'ನಿನ್ನ ಸಂಕಟ ನೋಡಲಾಗುತ್ತಿರಲಿಲ್ಲ. ಮಕ್ಕಳನ್ನು ಸ್ಕೂಲ್ ಬಿಡಿಸಿ ಕರೆತಂದೆ. ಇಲ್ಲೇ ಕಾನ್ವೆಂಟ್‌ನಲ್ಲಿ ಸೇರಿಸು' ಎನ್ನುತ್ತ ಕಾರ್ತಿಕ ಒಳಬಂದ. ಮಕ್ಕಳೂ ಮೌನವಾಗಿ ಒಳಬಂದವು. ಅವಳ ಕೈಯಲ್ಲಿಯ ಕತ್ತಿ ಕೆಳಜಾರಿತು. ತಕ್ಷಣ ಓಡಿ ಒಳಬಂದಳು. ಕಾರ್ತಿಕ ಬಾತ್‌ರೂಮಿನಲ್ಲಿದ್ದ. ಟೇಬಲ್ ಮೇಲಿದ್ದ, ರಾತ್ರಿ ಬರೆದಿಟ್ಟಿದ್ದ ಪತ್ರವನ್ನು ನಡುಗುವ ಕೈಗಳಿಂದ ಹರಿದು ಕಿಟಕಿಯ ಬಳಿನಿಂತು ಹೊರತೂರಿದಳು. ಅಂಗಳದಲ್ಲಿಯ ಬಂಜೆ ಮರದ ಹಸುರಿನಲ್ಲಿ ಅವಳ ದೃಷ್ಟಿ ಸ್ಥಿರವಾಯಿತು. ಹೃದಯದಲ್ಲಿಯ ಬಯಕೆ ಬಿಕ್ಕಳಿಸಿ ಕಣ್ಣಲ್ಲಿ ನೀರು ಬಂತು.